ಇ) ಇದುವರೆಗೆ ಅವರುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ. ಈ ಹಣ ದುರುಪಯೋಗದ ಅಪೂರ್ಣಗೊಂಡ ಫಲಾನುಭವಿಗಳ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) 1992-93 ಮತ್ತು 1993-94ನೇ ಸಾಲಿನ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

1994-95ನೇ ಸಾಲಿನಲ್ಲಿ ಹಣ ದುರುಪಯೋಗದ ಪ್ರಕರಣಗಳು ಗಮನಕ್ಕೆ ಬಂದಿರುತ್ತದೆ.

ಆ) ತೀರ್ಥಹಳ್ಳಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯ ಕಿರಿಯ ಇಂಜಿನೀಯರ್‌ರಾದ ಶ್ರೀ ಡಿ.ಟಿ. ಕೆಂಚಪ್ಪ ಅವರ ವಿರುದ್ಧ ವಿಚಾರಣೆ ಮಾಡಲಾಗುತ್ತಿದೆ.

ಇ) ಸಂಬಂದಪಟ್ಟ ಕಿರಿಯ ಅಭಿಯಂತರರಾದ ಶ್ರೀ ಡಿ.ಟಿ. ಕೆಂಚಪ್ಪ ಅವರನ್ನು ಇಲಾಖಾ ವಿಚಾರಣೆ ಬಾಕಿ ಇರಿಸಿ ದಿನಾಂಕ : 27.5.95ರಲ್ಲಿ ಅಮಾನತ್ತಿನಲ್ಲಿಡಲಾಗಿತ್ತು. ನಂತರ ಸದರಿಯವರನ್ನು ಸೇವೆಗೆ ಪುನರ್ ನೇಮಕ ಮಾಡಿ ಸೊರಬ ತಾಲ್ಲೂಕಿಗೆ ಸ್ಥಳಾಂತರಿಸಿದೆ ಮತ್ತು ಸದರಿ ಅಪೂರ್ಣ ಕಾಮಗಾರಿಗಳ ಬಗ್ಗೆ ಇಲಾಖಾ ತನಿಖೆ ಹಾಗೂ ವಿಚಾರಣೆಗಾಗಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ (ಅಭಿವೃದ್ಧಿ) ಅವರನ್ನು ವಿಚಾರಣಾ ಅಧಿಕಾರಿಗಳನ್ನಾಗಿ ನೇಮಿಸಿದ್ದು, ವಿಚಾರಣೆ ಪ್ರಗತಿಯಲ್ಲಿದೆ. ಅಪೂರ್ಣಗೊಂಡ ಕಾಮಗಾರಿಗಳನ್ನು ಸದರಿ ಸಾಲಿನಲ್ಲಿ ಪೂರ್ಣಗೊಳಿಸಲು ಬೇರೊಬ್ಬ ಕಿರಿಯ ಅಭಿಯಂತರರ ಮೂಲಕ ವ್ಯವಸ್ಥೆ ಮಾಡಲಾಗಿದೆ.

ಕೈ ಪಂಪುಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ಹೊಣೆಗಾರಿಕೆ.

1725 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೈಪಂಪು ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ಹೊಣೆಗಾರಿಕೆ ಯಾವ ಇಲಾಖೆಗೆ ವಹಿಸಿದೆ? ಒಂದು ಬೋರ್‌ವೆಲ್‌ನ ವಾರ್ಷಿಕ ನಿರ್ವಹಣಾ ವೆಚ್ಚವೆಷ್ಟು?

ಆ) ಈ ರಾಜ್ಯದಲ್ಲಿ ಪಂಚಾಯ್ತಿಗಳೇ ನಿರ್ವಹಿಸುವ ತಾಲ್ಲೂಕುಗಳೆಷ್ಟು?

ಇ) ತೀರ್ಥಹಳ್ಳಿ ತಾ: ನಲ್ಲಿ ಈ ರೀತಿ ಬೋರ್‌ವೆಲ್‌ಗಳ ವಾರ್ಷಿಕ ನಿರ್ವಹಣೆಯನ್ನು ಪಂಚಾಯ್ತಿಗಳೇ ನಿರ್ವಹಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಇದರಿಂದ ಇಲಾಖೆಗೆ ಸಾಕಷ್ಟು ಉಳಿತಾಯ ಆಗುವುದರಿಂದ ಈ ರೀತಿ ಪಂಚಾಯ್ತಿಗಳೇ ನಿರ್ವಹಿಸುವ ಪಂಚಾಯ್ತಿಗಳಿಗೆ ಪ್ರೋತ್ಸಾಹ ಧನ ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ರಾಜ್ಯದಾದ್ಯಂತ ಕೈ ಪಂಪು ಕೊಳವೆಬಾವಿಗಳ ನಿರ್ವಹಣೆಯನ್ನು ಜನಾರೋಗ್ಯ ಶಿಲ್ಪಕಾರ್ಯ ವಲಯದ ವ್ಯಾಪ್ತಿಯ ಆಯಾ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗಗಳು ನೋಡಿಕೊಳ್ಳುತ್ತಿವೆ. ಸಣ್ಣಪುಟ್ಟ ನಿರ್ವಹಣೆಯನ್ನು ಆಯಾ ಗ್ರಾಮಪಂಚಾಯಿತಿಗಳೂ

ನೋಡಿಕೊಳ್ಳುತ್ತವೆ. ಪ್ರತಿ ಕೊಳವೆಬಾವಿಗೆ ವಾರ್ಷಿಕ ನಿರ್ವಹಣಾ ವೆಚ್ಚವನ್ನು ರೂ. 400-00 ಎಂದು ಅಂದಾಜು ಮಾಡಿ ಆಯಾ ಜಿಲ್ಲಾಪಂಚಾಯತ್‌ಗಳಿಗೆ ಒದಗಿಸಿದೆ.

ಅ) ಪ್ರಸ್ತುತ ತೀರ್ಥಹಳ್ಳಿ ತಾ. ನಲ್ಲಿ ಪಂಚಾಯಿತಿಗಳು ಈ ನಿರ್ವಹಣಾ ಕಾರ್ಯವನ್ನು ಮಾಡುತ್ತಿವೆ. ಇತರ ತಾಲ್ಲೂಕುಗಳಲ್ಲಿ ಸಹ ಸಂದರ್ಭಾನುಸಾರ ಸಣ್ಣ ಪುಟ್ಟ ರಿಪೇರಿಗಳನ್ನು ಆಯಾ ಪಂಚಾಯತಿಗಳೇ ಮಾಡುತ್ತಿವೆ. ಒಂದು ವೇಳೆ ಪಂಚಾಯಿತಿಗಳು ನಿರ್ವಹಣೆ ಮಾಡಲು ವಿಫಲವಾದಲ್ಲಿ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗಗಳು ರಿಪೇರಿ ಕೆಲಸಗಳನ್ನು ನಿರ್ವಹಿಸುತ್ತವೆ.

ಇ) ಬಂದಿದೆ.

ಈ) ಕೈಪಂಪು ದುರಸ್ತಿಯ ಕೆಲಸವನ್ನು ಕೈಗೊಳ್ಳುವ ಪಂಚಾಯಿತಿಗಳಿಗೆ ಒಂದು ಕೈಪಂಪಿಗೆ ಗರಿಷ್ಠ ರೂ. 400-00 ರಂತೆ ಹಣವನ್ನು ಬಿಡುಗಡೆ ಮಡಲು ಜಿಲ್ಲಾ ಪಂಚಾಯಿತಿಗಳಿಗೆ ಸೂಚಿಸುವ ಬಗ್ಗೆ ಪರಿಶೀಲಿಸಲಾಗುವುದು.

ಹುಬ್ಬಳ್ಳಿಯ ಕೆ.ಎಂ.ಸಿ.ಯಲ್ಲಿ ಒಳರೋಗಿಗಳ ಊಟ ಉಪಹಾರ.

2129 - ಶ್ರೀ ಅಶೋಕ್ ಎಸ್. ಕಾಟ್ವೆ (ಹುಬ್ಬಳ್ಳಿ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಹುಬ್ಬಳ್ಳಿ, ಕೆ.ಎಂ.ಸಿ.ಯ ಒಳರೋಗಿಗಳಿಗೆ ಕೊಡುವ ಊಟ ಆಹಾರ ಬ್ರೆಡ್, ಮೊಟ್ಟೆ ಹಾಗೂ ಹಾಲೂ ಇತ್ಯಾದಿಗಳ ಖರ್ಚು ಮಾಡಿದ ಹಣವೆಷ್ಟು? ಅಲ್ಲದ ಯಾವ ಯಾವ ಗುತ್ತಿಗೆದಾರರ ಮೂಲಕ ವಿತರಿಸಲಾಗಿದೆ.

ಡಾ॥ ಎಂ. ಶಂಕರ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಒಳರೋಗಿಗಳಿಗೆ 1995-96ನೇ ಸಾಲಿನಲ್ಲಿ ಊಟ, ಆಹಾರ, ಬ್ರೆಡ್, ಮೊಟ್ಟೆ ಹಾಗೂ ಹಾಲು ಇತ್ಯಾದಿಗಳಿಗೆ ಖರ್ಚು ಈ ಕೆಳಗಿನಂತೆ ಇದೆ.

1) ಊಟ - ಆಹಾರ (ಮೊಟ್ಟೆ ಸೇರಿ) - 17,93,743.00

2) ಹಾಲು - 11,00,207.00

3) ಬ್ರೆಡ್ - 5,53,850.00

1) ಶ್ರೀ ಜಿ.ಎ. ಕಿಲ್ಲೇದಾರ, ನವನಗರ, ಹುಬ್ಬಳ್ಳಿ ಇವರಿಂದ ಆಹಾರ ಪದಾರ್ಥ ಮೊಟ್ಟೆ ಸೇರಿ ಖರೀದಿಸಲಾಗುತ್ತಿರುತ್ತದೆ.

2. ಕೆ.ಎಂ.ಎಫ್. ಧಾರವಾಡದಿಂದ ಹಾಲು ಖರೀದಿಸಲಾಗುತ್ತಿರುತ್ತದೆ.

3. ಶ್ರೀ ಎಸ್.ಎನ್. ಮುಲ್ಲಾ, ಶಾರ್ಜಾ ಸ್ಟೆನ್ ಬೇಕರಿ, ಹಳೇ-ಹುಬ್ಬಳ್ಳಿ ಇವರಿಂದ ಖರೀದಿಸಲಾಗುತ್ತಿರುತ್ತದೆ.

ಹುಬ್ಬಳ್ಳಿಯ ಕೆ.ಎಂ.ಸಿ. ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಿಗೆ ಮಂಜೂರಾದ ಸಿಬ್ಬಂದಿ.

2130 - ಶ್ರೀ ಅಶೋಕ್ ಎಸ್. ಕಾಟ್ವೆ (ಹುಬ್ಬಳ್ಳಿ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕೆ.ಎಂ.ಸಿ. ಹಾಗೂ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗಳಿಗೆ 1994-95ನೇ ಸಾಲಿನಲ್ಲಿ ಮಂಜೂರಾದ ಸಿಬ್ಬಂದಿ ಹುದ್ದೆಗಳೆಷ್ಟು?